

# ಬೆಕ್ಕುಗಳಿಗೇಕೆ ಬಿಸಿಲು ಕಾಯಿಸುವ ಹವ್ಯಾಸ?

■ ಬಿ. ಪಾಂಡುರಂಗಯ್ಯ
ಚಿತ್ರ: ಶ್ರೀಕೃಷ್ಣ ಕೆದಿಲಾಯ

ಒಂದಾನೊಂದು ಕಾಲದಲ್ಲಿ ಜಗತ್ತಿನಲ್ಲಿ ಪ್ರಳಯದಿಂದಾಗಿ ಭೂಮಿಯು ಸಂಪೂರ್ಣ ಜಲಸಮಾಧಿಯಾಗಲಿತ್ತು. ಆಗ ನೋವಾ ಎಂಬ ಹೆಸರಿನ ಒಬ್ಬ ವ್ಯಕ್ತಿಯು ಆಯ್ದ ಕೆಲವು ಪ್ರಾಣಿಗಳನ್ನು ಜಲಸಮಾಧಿಯಿಂದ ರಕ್ಷಿಸಲು ಬೃಹತ್ ಪ್ರಮಾಣದ ಸುಭದ್ರ ನೌಕೆಯೊಂದನ್ನು ಹತ್ತಾರು ವರ್ಷಗಳ ಕಾಲ ಪರಿಶ್ರಮಪಟ್ಟು ಸಿದ್ಧಪಡಿಸಿದ. ಕೊನೆಗೆ ಒಂದು ದಿನ ತಾನು ಆಯ್ದ ಎಲ್ಲ ಪ್ರಾಣಿಗಳನ್ನು ಹಡಗಿನಲ್ಲಿ ತುಂಬಿದನು. ಅಷ್ಟು ಹೊತ್ತಿಗಾಗಲೇ ಆಕಾಶದಲ್ಲಿ ಕಪ್ಪು ಮೋಡಗಳು ದಟ್ಟವಾಗಿ ಸಂಗ್ರಹಗೊಂಡಿದ್ದವು. ಗುಡುಗು, ಸಿಡಿಲುಗಳ ಆರ್ಭಟವೂ ಪ್ರಾರಂಭವಾಗಿ ಭಾರೀ ಮಳೆಯ ಮುನ್ಸೂಚನೆಯನ್ನು ನೀಡತೊಡಗಿದವು.

ಅಷ್ಟರಲ್ಲಿ ಸಮಸ್ಯೆಯೊಂದು ಎದುರಾಯಿತು. ಬಹಳ ಪರಿಶ್ರಮಪಟ್ಟು ನೋವಾನು ಸಿದ್ಧಪಡಿಸಿದ ಹಡಗನ್ನು ಏರಲು ನೋವಾನ ಪತ್ನಿ ಶ್ರೀಮತಿ ನೋವಾ ನಿರಾಕರಿಸಿದಳು. ಅವಳು ಕೈಯಲ್ಲಿ ಒಂದು ಬೆಕ್ಕನ್ನು ಹಿಡಿದುಕೊಂಡು ದಡದಲ್ಲಿಯೇ ನಿಂತಿದ್ದಳು. ಅವಳು ತನ್ನ ಬೆಕ್ಕಿನ ಬಗ್ಗೆ ಗಂಡನೊಡನೆ ನಡೆಸಿದ ಚರ್ಚೆಯಿಂದ ಬೇಸರಗೊಂಡಿದ್ದಳು. ಹಡಗಿನಲ್ಲಿ ಅದಾಗಲೇ ಎರಡು ಬೆಕ್ಕುಗಳನ್ನು ತುಂಬಿರುವುದರಿಂದ ಅವಳಲ್ಲಿರುವ ಬೆಕ್ಕನ್ನು ಅಲ್ಲಿಯೇ ಬಿಟ್ಟು ಬರುವಂತೆ ನೋವಾನು ತನ್ನ ಪತ್ನಿಗೆ ಸೂಚಿಸಿದ್ದೇ ಸಮಸ್ಯೆಗೆ ಮೂಲ ಕಾರಣವಾಗಿತ್ತು ಮತ್ತು ಶ್ರೀಮತಿ ನೋವಾ ತನ್ನ ಪ್ರೀತಿಯ ಬೆಕ್ಕನ್ನು ಬಿಟ್ಟು ಹಡಗನ್ನೇರಲು ಸಿದ್ಧಳಿರಲಿಲ್ಲ.

ಹಟತೊಟ್ಟ ಶ್ರೀಮತಿ ನೋವಾ ತೀರದಲ್ಲಿಯೇ ನಿಂತಳು. ಬೇಗ ಹಡಗಿನೊಳಗೆ ಬಾ, ಮಳೆ ಸುರಿಯಲು ಪ್ರಾರಂಭವಾಗುತ್ತಿದೆ ಎಂದು ನೋವಾನು ಹೆಂಡತಿಯನ್ನು ಮತ್ತೆ ಮತ್ತೆ ಕರೆಯತೊಡಗಿದನು.

ಅದಾಗಲೇ ಗುಡುಗು ಸಿಡಿಲಿನೊಂದಿಗೆ ಭಾರೀ ಮಳೆ ಪ್ರಾರಂಭವಾಯಿತು. ಆಗಲೂ ತನ್ನ ಹೆಂಡತಿ ಹಡಗನ್ನೇರದಿರುವುದನ್ನು ಕಂಡು ನೋವಾನು ಸಿಟ್ಟಿನಿಂದ ತನ್ನ ಹೆಂಡತಿಯ ಕೈ ಹಿಡಿದು ಎಳೆಯುತ್ತಾ ದೆವ್ವದಂಥ ಏ ಹೆಣ್ಣೇ? ಹಡಗಿನೊಳಗೆ ಬಾ, ಜೊತೆಗೆ ನಿನ್ನ ದರಿದ್ರ ಬೆಕ್ಕನ್ನು ಇತ್ತ ತಾ ಎಂದು ಚೀರಿದನು. ಇದೇ ಆಮಂತ್ರಣಕ್ಕಾಗಿ ಹಡಗಿನ ಪಕ್ಕದಲ್ಲಿಯೇ